
# ಜಿಂಕೆ ಮತ್ತು ನರಿ

■ ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು



ಸುಡು ಬಿಸಿಲಿನ ಒಂದು ದಿನ. ಅವಂತಿ ಎಂಬ ದೊಡ್ಡ ಬೆಟ್ಟದಲ್ಲಿ ಬೆಂಕಿ ಬಿದ್ದಿತ್ತು. ಆಗ ಮಾತು ಬಾರದ ಮೂಕ ಪ್ರಾಣಿಗಳು ತಮ್ಮ ಪ್ರಾಣದ ರಕ್ಷಣೆಗಾಗಿ ಚೆಲ್ಲಾಪಿಲ್ಲಿ ಆಗಿದ್ದವು. ಹಾಗೇ ಓಡುತ್ತ ಬಂದ ಕೆಲವು ಪ್ರಾಣಿಗಳು ಆ ಅವಂತಿ ಬೆಟ್ಟದ ಇಳಿಜಾರು ಪ್ರದೇಶದಲ್ಲಿನ ಗಿಡಗಂಟಿಗಳ ನಡುವೆ ಆಶ್ರಯ ಪಡೆದುಕೊಂಡಿದ್ದವು. ಆ ರೀತಿ ಆಶ್ರಯ ಪಡೆದು ಬಂದ ಪ್ರಾಣಿಗಳಲ್ಲಿ ಒಂದು ಪುಟ್ಟ ಜಿಂಕೆ ಮರಿ ಹಾಗೂ ನರಿಯ ಮರಿ ಒಂದೆಡೆ ಬಂದು ಸೇರಿದ್ದವು. ಕಷ್ಟಕಾಲದಲ್ಲಿ ಅವು ಒಂದಕ್ಕೊಂದು ಧೈರ್ಯ ಹೇಳುತ್ತ ಬೆಳೆಯತೊಡಗಿದ್ದವು. ವಿಚಿತ್ರವೆಂದರೆ ಸದಾ ಜಿಂಕೆಯೊಂದಿಗೆ ಇರುತ್ತಿದ್ದ ನರಿ, ಬಾಲ್ಯದಿಂದಲೂ ಸಸ್ಯಾಹಾರವನ್ನೇ ತಿನ್ನುವುದನ್ನು ರೂಢಿಸಿಕೊಂಡಿತು. ಕಾಲ ಸರಿದಂತೆ ಎರಡೂ ಮರಿಗಳು ದೊಡ್ಡವಾದವು. ಈಗ ಜಿಂಕೆ ನೆತ್ತಿಯ ಮೇಲೆ ಆಕರ್ಷಕ ಉದ್ದನೆಯ ಕೊಂಬು ಬೆಳೆದವು. ಅಂತೆಯೇ ಇತ್ತ ನರಿ ಕೂಡ ಮೊದಲಿಗಿಂತ ದಷ್ಟಪುಷ್ಟವಾಗಿ ಬೆಳೆದಿತ್ತು. ಅಷ್ಟಾದರೂ ಅವುಗಳಲ್ಲಿನ ಅನ್ಯೋನ್ಯತೆ ಒಂದಿನಿತೂ ಕಡಿಮೆ ಆಗಿರಲಿಲ್ಲ. ಎಲ್ಲೇ ಹೋದರೂ ಜೊತೆ ಜೊತೆಯಾಗಿಯೇ ಹೋಗುತ್ತಿದ್ದವು.

ಹೀಗೆ ಒಂದು ಸಂಜೆ ಈ ಜಿಂಕೆ ಮತ್ತು ನರಿ, ಎರಡೂ ಸೇರಿ ವಾಯುವಿಹಾರಕ್ಕೆ ಹೊರಟಾಗ, ಜಿಂಕೆಗೆ ನೀರಡಿಕೆ ಆಯಿತು. ಆಗ ಹತ್ತಿರದಲ್ಲಿದ್ದ ತೊರೆ ತೋರಿಸುತ್ತ ನರಿ, ಜಿಂಕೆಗೆ ‘ಅಗೋ ಅಲ್ಲಿ ನೀರಿದೆ ನೀನು ಕುಡಿದು ಬಾ... ನೀ ಬರುವತನಕ ಇಲ್ಲೇ ಮರದ ನೆರಳಿನಲ್ಲಿ ನಾ ನಿಂತಿರುವೆ’ ಎಂದು ಹೇಳಿತು. ‘ಸರಿ’ ಎಂದ ಜಿಂಕೆ ಅತ್ತ ನೀರು ಕುಡಿಯಲು ಹೊರಟು ಹೋಯಿತು. ಅಷ್ಟರಲ್ಲಿ ಮರದ ಹಿಂಬದಿಯಿಂದ ಮೆಲ್ಲಗೆ ಬಂದ ಹುಲಿ, ನರಿಯನ್ನು ಕೂಗಿ ‘ಏ... ಪೆದ್ದಾ, ಜಿಂಕೆ ಮಾಂಸ ಎಷ್ಟು ರುಚಿಯಾಗಿರುತ್ತೆ ಅಂತ ನಿನಗೇನಾದರೂ ಗೊತ್ತಾ? ನೋಡು, ಹೇಗಾದರೂ ಮಾಡಿ ಆ ಜಿಂಕೆಯನ್ನು ಪುಸಲಾಯಿಸಿ ಆ ಬದಿ ಕರೆದು ತಾ, ನಾನು ಬೇಟೆ ಆಡಿ ನಿನಗೆ ಅರ್ಧ ಕೊಡುವೆ’ ಎಂದಿತು. ಹುಲಿಯ ಮಾತು ಆಲಿಸಿದ ನರಿಗೆ ಮೈ ಮನವೆಲ್ಲ ಉರಿದಂತಾಯಿತು. ಕೋಪದಿಂದ ಅದು ಕೆಕ್ಕರಿಸಿ ಹುಲಿಯನ್ನು ನೋಡಿ ‘ಏ... ಮೂರ್ಖ, ಅದು ಈ ಜನ್ಮದಲ್ಲಿ ಸಾಧ್ಯವಾಗದ ಮಾತು. ನಾನು ಎಂತೆಂಥ ಕಷ್ಟಕ್ಕೆ ಸಿಲುಕಿದಾಗ ಆ ಜಿಂಕೆ ತನ್ನ ಪ್ರಾಣವನ್ನೂ ಲೆಕ್ಕಿಸದೇ ನನ್ನನ್ನು ಉಳಿಸಿದೆ ಅಂತಹ ಮಿತ್ರನಿಗೆ ನಾನು ಅನ್ಯಾಯ ಮಾಡಲಾ? ತೊಲಗಾಚೆ ಇನ್ನೊಂದು ಬಾರಿ ಆ ಮಾತು ನಿನ್ನ ಬಾಯಿಯಿಂದ ಬಂದರೆ ಪರಿಸ್ಥಿತಿ ನೆಟ್ಟಗಿರಲ್ಲ ತಿಳೀತಾ?’ ಎನ್ನುತ್ತ ಅದಕ್ಕೆ ತಿಳಿಯದ ರೀತಿ ಅದರ ಎರಡೂ ಕಣ್ಣೊಳಗೆ ಮರಳು ಎರಚಿತು. ಹುಲಿಯ ಕಣ್ಣಲ್ಲಿ ಮರಳು ಬೀಳುತ್ತಿದ್ದಂತೆ ಅದು ‘ಅಯ್ಯೋ.. ಉರಿ... ಉರಿ ಎಂದು ಅರಚುತ್ತ ಕೆಳಗೆ ಬಿದ್ದು ಬಿಟ್ಟಿತು.

ಅಷ್ಟರಲ್ಲಿ ನರಿ ರಭಸದಿಂದ ಓಡಿ ಜಿಂಕೆಯ ಬಳಿ ಹೋಗಿ ಅದನ್ನು ಕರೆದುಕೊಂಡು ಪಲಾಯನ ಮಾಡಿತು. ಇತ್ತ ಕೆಲ ನಿಮಿಷಗಳ ಕಾಲ ಸುಧಾರಿಸಿಕೊಂಡು ಎಚ್ಚೆತ್ತ ಹುಲಿ ತನ್ನಷ್ಟಕ್ಕೆ ತಾನು ‘ಓಹೋ... ನರಿ ನೀನು ನನ್ನನ್ನೆ ಹೆದರಿಸುವಂತಾದೆಯಾ? ತಾಳು. ಇಷ್ಟರಲ್ಲಿಯೇ ನಿನಗೂ ಆ ಜಿಂಕೆಗೂ ಮುಕ್ತಿ ಕೊಡದಿದ್ದರೆ ನಾನು ನೆಮ್ಮದಿಯಿಂದ ಇರಲಾರೆ’ ಎಂದು ಶಪಥ ಮಾಡಿತು. ಈ ಹುಲಿ ಮಾತಾಡುವುದನ್ನು ಅದೇ ಮರದ ಮೇಲ್ತುದಿಯಲ್ಲಿದ್ದ ಒಂದು ಕಾಗೆ ಕೇಳಿಸಿಕೊಂಡಿತ್ತು. ಅದು ತನ್ನ ಮನದಲ್ಲಿ ಆ ಎರಡೂ ಜೀವಗಳನ್ನು ಹೇಗಾದರೂ ಮಾಡಿ ರಕ್ಷಿಸಬೇಕು ಎಂದುಕೊಂಡಿತು.

ಹಾಗೆಯೇ ಕೆಲ ದಿನಗಳು ಉರುಳಿದವು. ಆ ಹೊತ್ತಿಗೆ ಜಿಂಕೆಯಾಗಲಿ, ನರಿಯಾಗಲಿ ಹುಲಿಯ ವಿಚಾರ ಸಂಪೂರ್ಣ ಮರೆತುಬಿಟ್ಟಿದ್ದವು. ಆದರೆ ಹುಲಿ ಮಾತ್ರ ಒಳ ಒಳಗೇ ಕುದಿಯುತ್ತಿತ್ತು. ಅದೊಂದು ದಿನ ಸಾಯಂಕಾಲ ನರಿ ಹಾಗೂ ಜಿಂಕೆ ಆನಂದದಿಂದ ವಾಯು ವಿಹಾರಕ್ಕೆ ಹೊರಟಿದ್ದವು. ಆಗ ಎದುರುಗಡೆಯಿಂದ ಬಂದ ಆ ಹುಲಿರಾಯನನ್ನು ಕಂಡು ಓಡಲು ಮುಂದಾದವು. ಆಗ ಹುಲಿ ತುಂಬಾ ಸಭ್ಯನಂತೆ ನಟಿಸುತ್ತ ‘ನಿಮ್ಮಿಬ್ಬರನ್ನು ನೋಡಿ ಬಹಳ ಸಂತೋಷವಾಯಿತು. ನಾನೂ ಸಹ ಮಾಂಸಾಹಾರ ತ್ಯಜಿಸಿ ಬರೀ ಸಸ್ಯಾಹಾರವನ್ನೇ ತಿನ್ನುತ್ತಿದ್ದೇನೆ. ಏಕೆಂದರೆ ಮಾಂಸಾಹಾರ ರುಚಿಯಲ್ಲಿ ಯಾವ ಬದಲಾವಣೆ ಇರಲ್ಲ. ಅದೂ ಅಲ್ಲದೆ, ನನಗೆ ವಯಸ್ಸಾಗುತ್ತ ಬಂದಿರುವುದರಿಂದ ಅರಗಿಸಿ ಕೊಳ್ಳುವ ಶಕ್ತಿ ಕೂಡ ಇಲ್ಲ. ಸಸ್ಯಾಹಾರದಲ್ಲಿ ವೈವಿಧ್ಯತೆ ಇದೆ. ರುಚಿಯಾಗಿಯೂ ಇರುತ್ತೆ ಅಂತ ನನಗೆ ಈಗೀಗ ತಿಳಿದಿದೆ’ ಎಂದು ನಾಟಕೀಯ ಮಾತುಗಳನ್ನಾಡಿ ಅವುಗಳನ್ನು ಮರಳು ಮಾಡಿತು.

‘ಹಾಂ.. ನಿನ್ನೆಯ ದಿನ ಆ ಕರಡಿಮಾಮ ಎಲ್ಲಿಂದಲೋ ಬುಟ್ಟಿಗಟ್ಟಲೆ ವಿವಿಧ ಹಣ್ಣುಗಳನ್ನು ತಂದು ನನ್ನ ಗುಹೆಯಲ್ಲಿ ಇಟ್ಟಿದ್ದಾನೆ. ಇರೋದು ನಾನೊಬ್ಬ ಎಷ್ಟು ಅಂತ ತಿನ್ನಲಿ ಅದಕ್ಕೆ ದಯವಿಟ್ಟು ನೀವಿಬ್ಬರೂ ನನ್ನಲ್ಲಿಗೆ ಬಂದರೆ ಎಲ್ಲ ಒಟ್ಟಿಗೆ ಕುಳಿತು ತಿನ್ನೋಣ’ ಎಂದಾಗ ಮೊದ ಮೊದಲು ಅದರ ಮಾತಿಗೆ ಅನುಮಾನಗೊಂಡ ಜಿಂಕೆ ಮತ್ತು ನರಿ ಯೋಚನೆ ಮಾಡತೊಡಗಿದವು. ಅಷ್ಟರಲ್ಲಿ ಆ ಪಾಕಡಾ ಹುಲಿ ಪುನಃ ‘ಸುಳ್ಳಲ್ಲ. ದೇವರಾಣೆ ಮಾಡಿ ಹೇಳುವೆ ನನ್ನನು ನಂಬಿ’ ಎಂದು ಹೇಳಿದಾಗ ಅವೆರಡೂ ‘ಆಯ್ತು ನಾಳೆ ಬೆಳಿಗ್ಗೆ ಬರುತ್ತೇವೆ’ ಎಂದು ಹೇಳಿದವು. ಅವುಗಳ ಮಾತು ಆಲಿಸಿದ